ನಿ-72-36

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ. ಕೆ.ಹರೀಶ್ ಕುಮಾರ್, ಇವರು ನಿಯಮ-72ರಡಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರವನ್ನು ಒದಗಿಸುವ ಬಗ್ಗೆ**

**ಪ್ರಶ್ನೆ:**

ಈ ಹಿಂದೆ ಕಂದಾಯ ಇಲಾಖೆಯಲ್ಲಿ ನ್ಯಾಯಾಲಯಗಳ ಡಿಕ್ರಿ ಆದೇಶದಂತೆ ಮ್ಯುಟೇಷನ್ ಮಾಡಿ ಪಹಣಿಯಲ್ಲಿ ಬದಲಾವಣೆಯಾಗುತ್ತಿದ್ದು. ಇತ್ತೀಚೆಗೆ ತಂತ್ರಾಂಶದಲ್ಲಿ ಅವಕಾಶ ಇಲ್ಲ ಎಂದು ತಿಳಿಸಿ ಅನಾವಶ್ಯಕವಾಗಿ 11 'ಇ' ನಕ್ಷೆ ಇತ್ಯಾದಿ ದಾಖಲೆ ಬೇಕು ಎಂಬುದಾಗಿ ಜನಸಾಮಾನ್ಯರನ್ನು ಅಲೆದಾಡಿಸಲಾಗುತ್ತಿದೆ. ಆದ್ದರಿಂದ ನ್ಯಾಯಾಲಯದ ಆದೇಶಗಳಂತೆ ಮ್ಯುಟೇಷನ್ ಮಾಡಿ ಪಹಣಿಯಲ್ಲಿ ಸೂಕ್ತವಾಗಿ ಬದಲಾವಣೆ ಮಾಡಲು ಸರಳೀಕೃತ ವ್ಯವಸ್ಥೆ ಜಾರಿಗೆ ತರುವ ಮೂಲಕ ಸಾರ್ವಜನಿಕರಿಗೆ ಆಗುವ ತೊಂದರೆಗಳನ್ನು ನಿವಾರಿಸುವ ಬಗ್ಗೆ ಸ್ಪಷ್ಟ ಆದೇಶವನ್ನು ಹೊರಡಿಸುವ ಬಗ್ಗೆ.

**ಉತ್ತರ:**

**ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 128 ರಡಿಯಲ್ಲಿ ಹಕ್ಕುಗಳ ಆರ್ಜನೆಯನ್ನು ವರದಿ ಮಾಡುವುದರ ಬಗ್ಗೆ ತಿಳಿಸಿದ್ದು ಕಾಯ್ದೆಯು ಈ ಕೆಳಕಂಡಂತೆ ಇರುತ್ತದೆ.**

"ಯಾವನೇ ವ್ಯಕ್ತಿಯು ಈ ಉಪಪ್ರಕರಣದ ಮೇರೆಗೆ ನೀಡಿದ ಬಗ್ಗೆ ವಿಭಜನೆಯಲ್ಲಿ ಅವನು ಪಡೆದ ಹಕ್ಕನ್ನು ಅಂಥ ಭೂಮಿಯ ಅಳತೆ ಮತ್ತು ಗಡಿ ಗುರುತುಗಳು ಮತ್ತು ಇತರ ಗೊತ್ತುಮಾಡಿದ ವಿವರಗಳನ್ನು ಸ್ಪಷ್ಟಪಡಿಸಿದ ನಕ್ಷೆಯ ವರದಿಯೊಂದಿಗೆ ಅನುಬಂಧಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯ ಅನುಮತಿ ಪಡೆದ ಮೋಜಣಿದಾರನಿಂದ ನಕ್ಷೆಯನ್ನು ತಯಾರಿಸತಕ್ಕದ್ದು"

**ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 131-ಸಿ ರಡಿಯಲ್ಲಿ ಕಾಯ್ದೆಯು ಈ ಕೆಳಕಂಡಂತೆ ತಿಳಿಸಿರುತ್ತದೆ.**

"ಯಾವನೇ ವ್ಯಕ್ತಿಯು 128ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂರನೇ ಪರಂತುಕದ ಅನುಸಾರವಾಗಿ ಅವನು ಪಡೆದ ಹಕ್ಕನ್ನು ವರದಿ ಮಾಡುವ ವೇಳೆ ಅಥವಾ ಯಾವನೇ ವ್ಯಕ್ತಿಯು ಮೋಜಣಿ ಅಥವಾ ಉಪ-ಸಂಖ್ಯೆಯ ಭಾಗವಾಗಿರುವ ಯಾವುದೇ ಭೂಮಿಯನ್ನು ಪರಭಾರೆ ಮಾಡಲು ನೋಂದಣಿ ಪ್ರಾಧಿಕಾರಿಯ ಮುಂದೆ ಪತ್ರವನ್ನು ಹಾಜರುಪಡಿಸುವ ಉದ್ದೇಶಕ್ಕಾಗಿ ಲೈಸೆನ್ಸು ಪಡೆದ ಮೋಜಣಿದಾರನಿಂದ ತಯಾರಾದ ಸದರಿ ಸ್ವತ್ತಿನ ನಕ್ಷೆಯನ್ನು ಪಡೆಯತಕ್ಕದ್ದು"

**ನೋಂದಣಿ ಕಾಯ್ದೆ 1908 ಕಲಂ 21 (1) ರಡಿಯಲ್ಲಿ ಕಾಯ್ದೆಯು ಈ ಕೆಳಕಂಡಂತಿರುತ್ತದೆ.**

"ಸ್ಥಿರ ಸ್ವತ್ತಿಗೆ ಸಂಬಂಧಪಟ್ಟ ಯಾವುದೇ ಮರಣಶಾಸನೇತರ ದಸ್ತಾವೇಜನ್ನು ಅದು ಅಂಥ ಸ್ವತ್ತನ್ನು ಗುರುತಿಸಲು ಸಾಕಷ್ಟಾದ ಅದರ ವಿವರಣೆಯನ್ನು ಒಳಗೊಂಡಿದ್ದ ಹೊರತು ನೋಂದಣಿಗಾಗಿ ಅಂಗೀಕರಿಸತಕ್ಕದಲ್ಲ".

ಈ ಹಿನ್ನಲೆಯಲ್ಲಿ ಮೇಲ್ಕಂಡ ಕಾಯ್ದೆಗಳನುಸಾರ, ತಂತ್ರಾಂಶದಲ್ಲಿ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ವಿಭಾಗ ಪತ್ರ ಹಾಗೂ ಭಾಗಶಃ ವಿಸ್ತೀರ್ಣವನ್ನು ಪರಭಾರೆ ಮಾಡುವ ಪ್ರಕರಣಗಳಲ್ಲಿ ಮಾತ್ರ 11 'ಇ' ನಕ್ಷೆಗಳನ್ನು ಕಡ್ಡಾಯ ಮಾಡಲಾಗಿದೆ. ಏಕಮಾಲೀಕತ್ವ ಪೂರ್ಣ ವಿಸ್ತೀರ್ಣವನ್ನು ಪರಭಾರೆ ಮಾಡುವ ಪ್ರಕರಣಗಳಲ್ಲಿ 11 'ಇ' ನಕ್ಷೆಗಳನ್ನು ನೋಂದಣಿ ಮಾಡಿಸಲು ಕಡ್ಡಾಯಗೊಳಿಸಿರುವುದಿಲ್ಲ.

ಮೇಲೆ ವಿವರಿಸಿರುವ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸ್ಥಿರಾಸ್ತಿ ಸ್ವತ್ತುಗಳ ದಸ್ತಾವೇಜು ನೋಂದಣಿಗೆ 11 'ಇ' ನಕ್ಷೆಯನ್ನು ಕಡ್ಡಾಯಗೊಳಿಸಲಾಗಿದೆ ಹೊರತು ಸಾರ್ವಜನಿಕರಿಗೆ ಅನಾವಶ್ಯಕವಾಗಿ ತೊಂದರೆ ಕೊಡುವ ಉದ್ದೇಶ ಹೊಂದಿರುವುದಿಲ್ಲ.

ಕಂಇ 159 ಎಂಆರ್ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು